<u>ದಿನಾಂಕಃ19-06-2018 ರಂದು ಪಿಡಬ್ಲ್ಯು-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ.ಎಂಎಸ್‌ಹೆಚ್ ವಕೀಲರಿಂದ.</u>

ನಾನು ಒಕ್ಕಲುತನವನ್ನು ಮಾಡುತ್ತೇನೆ. ನಾನು ಈ ಮೊದಲು ಮಾಜಿಸೈನಿಕ ಅಂತಾ 22 ವರ್ಷಗಳ ಕಾಲ ಕರ್ತವ್ಯನಿರ್ವಹಿಸಿರುತ್ತೇನೆ. ನಾನು ಸ್ವಯಂನಿವೃತ್ತಿ ಹೊಂದಿರುತ್ತೇನೆ. ನೀವು ಸಿಆರ್‌ಪಿಎಫ್‌ನಲ್ಲಿ ಪೋಲಿಸ ಅಂತಾ ಕೆಲಸಮಾಡಿರುತ್ತೀರಿ ಅಂದರೆ ಸಾಕ್ಷಿಯು ನಾನು ಸಿಪಾಯಿ ಅಂತಾ

ಕೆಲಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಸೈನಿಕ ಸೇವೆಯಲ್ಲಿ ಕಾರ್ಯನಿರ್ವಹಿಸಿರುತ್ತೀರೋ ಅಥವಾ ಮಾಜಿ ಸೈನಿಕನಾಗಿ ಕೆಲಸ ನಿರ್ವಹಿಸಿರುತ್ತಿರೋ ಅಂತಾ ಕೇಳಲು ನಾನು ಕೇಂದ್ರಿಯ ಮೀಸಲು ಪಡೆಯಲ್ಲಿ ಸೈನಿಕ (ಸಿಆರ್‌ಪಿಎಫ್) ಅಂತಾ ಕೆಲಸ ಮಾಡಿರುತ್ತೇನೆ. ಮಿಲಿಟರಿಯಲ್ಲಿ 24 ಗಂಟೆಗಳ ಕಾಲ ಕೆಲಸ ಮಾಡಬೇಕಾಗುತ್ತದೆ, ಸಿಆರಪಿಎಫ ಆದೇಶ ಬಂದಾಗ ಮಾತ್ರ ಕೇಂದ್ರ ಸರ್ಕಾರದ ಆದೇಶ ಬಂದಾಗ ಮಾತ್ರ ಹೋಗಬೇಕಾಗುತ್ತದೆ ಅಂದರೆ ಸರಿಯಲ್ಲ. ನಾನು ಎಸ್‌ಎಸ್‌ಎಲ್‌ಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸಿಆರ್‌ಪಿಎಫ್‌ನಲ್ಲಿ ದಿನಾಂಕಃ 24-04-1986ರಂದು ಸೇರಿಕೊಂಡಿರುತ್ತೇನೆ. ನಾನು ದಿನಾಂಕಃ 01-12-2007 ರಂದು ಸ್ವಯಂನಿವೃತ್ತಿಹೊಂದಿರುತ್ತೇನೆ. ಪ್ರತಿವರ್ಷ ನಮಗೆ ಎರಡು ತಿಂಗಳುಗಳ ಕಾಲ ರಜೆ ನೀಡುತ್ತಾರೆ. ನಾನು ನನ್ನ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಸಿಆರಪಿಎಫ್‌ನಲ್ಲಿ ಸೈನಿಕನಿದ್ದ ಮತ್ತು ಸ್ವಯಂ ನಿವೃತ್ತಿ ಹೊಂದಿದ ಬಗ್ಗೆ ನಮೂದಿಸಿರುತ್ತೇನೆ. ಹಾಗೇ ನಮೂದಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪ್ರತಿವಾದಿ ನನ್ನ ಚಿಕ್ಕಪ್ಪನಾಗಬೇಕು. ನನ್ನ ತಂದೆಯ ಅಣ್ಣ ತಮ್ಮಂದಿರು 4 ಜನ ಇರುತ್ತಾರೆ. ನನ್ನ ತಂದೆಗೆ ಇಬ್ಬರೂ ಸಹೋದರಿಯರು ಇರುತ್ತಾರೆ. ನನ್ನ ತಂದೆಯ ಅಣ್ಣತಮ್ಮಂದಿರ ಪೈಕಿ ಚನ್ನಬಸಪ್ಪ ಎನ್ನುವವನು ಮತ್ತು ಸಹೋದರಿಯರ ಪೈಕಿ ನೀಲವ್ವ ಎನ್ನುವವಳು ಪೋತಿಯಾಗಿರುತ್ತಾಳೆ. ದಾವಾದಾಸ್ತಿಯನ್ನು ಹೊರತುಪಡಿಸಿ ಇನ್ನು ಬೇರೆ ಬೇರೆ ಆಸ್ತಿಗಳು ಇರುತ್ತವೆ ಅಂದರೆ ಸರಿ. ಅವು ಹರನಗಿರಿ ಗ್ರಾಮದ ಸರ್ವೆ ನಂಬರಃ 51 ಕ್ಷೇತ್ರ 02ಎ-30ಗುಂಟೆ, ಅದು ನನ್ನ ತಂದೆಯವರ ಹೆಸರಿನಲ್ಲಿ ಇತ್ತು, ಈಗ ಅದು ನನ್ನ ತಮ್ಮನ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರಃ 88/2ಅ ಮತ್ತೊಂದು ಆಸ್ತಿ ಇದ್ದು ಕ್ಷೇತ್ರ 04ಎಕರೆ ಇರುತ್ತದೆ. ಸರ್ವೆ ನಂಬರಃ 88/2ಬ ಕ್ಷೇತ್ರ 05ಎಕರೆ-21ಗುಂಟೆ ಇರುತ್ತದೆ. ಸರ್ವೆ ನಂಬರಃ 34 ಕ್ಷೇತ್ರ 02ಎ-39ಗುಂಟೆ ಇರುತ್ತದೆ. ದಾವಾದಾಸ್ತಿ ಸರ್ವೆ ನಂಬರಃ 63/3 ಕ್ಷೇತ್ರ 04ಎ-15ಗುಂಟೆ ಇರುತ್ತದೆ. ಸರ್ವೆ ನಂಬರಃ 85 ಕ್ಷೇತ್ರ 39ಗುಂಟೆ ಇರುತ್ತದೆ. ಸರ್ವೆ ನಂಬರಃ 89 ಕ್ಷೇತ್ರ 05ಎಕರೆ ಇರುತ್ತದೆ. ಒಟ್ಟು ಆಸ್ತಿಯಲ್ಲಿ ದಾವಾದಾಸ್ತಿಯನ್ನು ಹಿಡಿದುಕೊಂಡು ಪ್ರತಿವಾದಿಗೆ 06 ಎಕರೆ ಜಮೀನು ಬರುತ್ತದೆ. ಸದರಿ ದಾವೆಯನ್ನು ಹೊರತುಪಡಿಸಿ ಇದೇ

ನ್ಯಾಯಾಲಯದಲ್ಲಿ ನಾಲ್ಕು ಪ್ರಕರಣಗಳು ಇರುತ್ತವೆ ಅಂದರೆ ಸಾಕ್ಷಿಯು 2 ಇವೆ ಎಂದು ನುಡಿಯುತ್ತಾರೆ. ಅಸಲು ದಾವಾ ನಂಬರಃ 168/2010 ಇದೇ ನ್ಯಾಯಾಲಯದಲ್ಲಿ ದಾವೆ ಮಾಡಲಾಗಿದೆ ಅಂದರೆ ಸರಿ. ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರಃ 169/2010 ಬಸಯ್ಯ ಹೆಬ್ಬಳ್ಳಿ ಮತ್ತು ಇತರರ ಮೇಲೆ ದಾವೆ ಮಾಡಿರುತ್ತೇನೆ ಅಂದರೆ ಸರಿ.

ಅಸಲು ದಾವೆ ನಂಬರಃ 169/2010ರಲ್ಲಿ ನನ್ನೊಂದಿಗೆ ನನ್ನ ಚಿಕ್ಕಪ್ಪಂದಿರಾದ ಚನ್ನಬಸಪ್ಪ ಮತ್ತು ಪ್ರತಿವಾದಿ ಇದ್ದರು. ಸದರಿ ದಾವೆಯನ್ನು ಮಾಡಲು ಪ್ರತಿವಾದಿಯು ಸಹಿ ಮಾಡಿಕೊಟ್ಟಿರುವದಿಲ್ಲ ಅಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಾದ ನಂತರ ಪ್ರತಿವಾದಿಯು ನನಗೆ ನೋಟಿಸ್ ಕೊಟ್ಟಿದ್ದರು ಅಂದರೆ ಸರಿ. ಇದೇ ನ್ಯಾಯಾಲಯದಲ್ಲಿ ಪ್ರತಿವಾದಿಯು ಸಹಿ ಮಾಡಿಕೊಟ್ಟಿರುತ್ತಾನೆ ಅಸಲು ದಾವೆ ನಂಬರಃ 169/2010 ರಲ್ಲಿ ಸಾಕ್ಷಿ ಹೇಳಿರುತ್ತೇನೆ ಅಂದರೆ ಸರಿ. ಜಮೀನಿಗೆ ಸಂಬಂಧಿಸಿದಂತೆ ನನ್ನ ಮೇಲೆ ಎರಡು ಕ್ರಿಮಿನಲ್ ಪ್ರಕರಣಗಳ ನಂಬರಃ 85/2011 ದಾಖಲಾಗಿರುತ್ತದೆ ಅಂದರೆ ಸರಿ. ಅದರಲ್ಲಿ ನನ್ನ ತಂದೆ ಮೊದಲನೇ ಆರೋಪಿತನು, ನಾನು ಎರಡನೇ ಆರೋಪಿತನು ಅಂದರೆ ಸರಿ. ನಾನು ಸಿಆರ್‌ಪಿಎಫ್‌ನಲ್ಲಿ ಕೆಲಸ ಮಾಡಿರುತ್ತೇನೆ ಎಂದು ಬರೀ ಪ್ರಕರಣ ದಾಖಲಿಸುವದೇ ನನ್ನ ಕೆಲಸ ಅಂದರೆ ಸರಿಯಲ್ಲ. ನಾನು ಹರನಗಿರಿ ಗ್ರಾಮದಲ್ಲಿ ಸಿಆರ್‌ಪಿಎಪನಲ್ಲಿ ಕೆಲಸ ಮಾಡಿರುತ್ತೇನೆ ಅಂತಾ ಜನರಿಗೆ ಹೆದರಿಸಿ, ಬೆದರಿಸಿ ಪ್ರಕರಣವನ್ನು ದಾಖಲಿಸುವದನ್ನು ಮಾಡುತ್ತೇನೆ ಅಂದರೆ ಸರಿಯಲ್ಲ. ನಾನು ಪೋಲಿಸ ಠಾಣೆಗೆ ಹೋಗಿ ಸಿಆರ್‌ಪಿಎಫನಲ್ಲಿ ಕೆಲಸ ಮಾಡಿರುತ್ತೇನೆ ಅಂತಾ ಪೋಲಿಸ ಠಾಣೆಗೆ ಹೋಗಿ ನನ್ನ ವಿರುದ್ದ ಪ್ರಕರಣ ದಾಖಲಾಗದ ಹಾಗೇ ನೋಡಿಕೊಳ್ಳುತ್ತೇನೆ ಅಂದರೆ ಸರಿಯಲ್ಲ.

ಖರೀದಿ ಕರಾರುಪತ್ರವಾದ ಸಮಯದಲ್ಲಿನ ಅಂದರೆ 2002ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುವದಿಲ್ಲ. ನಾನು 2002ನೇ ಸಾಲಿನ ಪಹಣಿ ಪತ್ರಿಕೆಯನ್ನು ನೋಡಿರುವದಿಲ್ಲ. ಸದರಿ ಪಹಣಿ ಪತ್ರಿಕೆಯನ್ನು ನೋಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈಗ ನಮಗೆ 2002ರ ಪಹಣಿ ಪತ್ರಿಕೆಯನ್ನು ತೆಗೆಯಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ

ಇರುವದಿಲ್ಲ. 2002ರ ಪಹಣಿ ಪತ್ರಿಕೆಯಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪಂದಿರ ಹೆಸರು ಸಾಮೂಹಿಕವಾಗಿ ದಾಖಲಾಗಿದ್ದವು ಅಂದರೆ ಸರಿ. ಸಾಕ್ಷಿಯು ಮುಂದುವರೆದು ಈಗಲೂ ಸಹ ದಾಖಲಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ 2002ನೇ ಸಾಲಿನ ದಾವಾದಾಸ್ತಿಯ ಪಹಣಿ ಪತ್ರಿಕೆಯಲ್ಲಿ ಒಟ್ಟು ಕ್ಷೇತ್ರ ಸಾಮೂಹಿಕವಾಗಿ ದಾಖಲಾಗಿರುತ್ತದೆ ಅಂದರೆ ಸರಿ. ನಿ.ಪಿ-1ರಲ್ಲಿ ನನ್ನ ತಂದೆ ಮತ್ತು ಪ್ರತಿವಾದಿಯ ಹೆಸರಿನಲ್ಲಿ ಪ್ರತ್ಯೇಕವಾಗಿ ಕ್ಷೇತ್ರ ನಮೂದಿಸಲಾಗಿರುತ್ತದೆ ಅಂದರೆ ಸರಿ. ನಿ.ಪಿ-1ರಲ್ಲಿ ನನ್ನ ತಂದೆಯ ಸಹೋದರಿಯರ ಹೆಸರು ದಾಖಲಾಗಿರುವದಿಲ್ಲ ಅಂದರೆ ಸಾಕ್ಷಿಯು ಅವರು ಮದುವೆಯಾಗಿ ಹೋಗಿರುತ್ತಾರೆ ಅಂದರೆ ಸರಿಯಲ್ಲ. ಸದರಿಯವರ ಹೆಸರನ್ನು ದಾಖಲಿಸಲು ನನ್ನ ತಂದೆಯ ಸಹೋದರಿಯನ್ನು ಒಪ್ಪಿಗೆಯನ್ನು ಪಡೆದಬಗ್ಗೆ ನನಗೆ ಗೊತ್ತಿರುತ್ತದೆ. ಮನೆತನಕ್ಕೆ ಸಂಬಂಧ ಒಟ್ಟು ಆಸ್ತಿಯಲ್ಲಿ ನನ್ನ ತಂದೆ ಮತ್ತು ಆತನ ಸಹೋದರರು 1987ರಲ್ಲಿ ಹಿಸ್ಸೇ ಮಾಡಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ದಾವಾದಾಸ್ತಿ ವಾಟ್ನಿಯಾದ ಬಗ್ಗೆ ಡ.ನಂಬರ ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ದಾವಾದಾಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ಹಿಸ್ಸೇಯಾಗಿರುವದಿಲ್ಲ ಅಂದರೆ ಸರಿಯಲ್ಲ. ನಾನು ದಾವೆಯನ್ನು ನ್ಯಾಯಾಲಯದ ಮೂಲಕ ಖರೀದಿ ಮಾಡಿಸಿಕೊಳ್ಳಲು ಮಾಗಣಿಯನ್ನು ಮಾಡಿರುತ್ತೇನೆ. ನಾನು ಸಂಚಕಾರ ಪತ್ರದ ಆಧಾರದ ಮೇಲೆ ಖರೀದಿ ಮಾಡಿಕೊಡಲು ಕೇಳಿಕೊಳ್ಳುತ್ತೇನೆ. ಸಿಆರ್‌ಪಿಎಫ್‌ನಲ್ಲಿ ನಾನು ಕರ್ತವ್ಯ ನಿರ್ವಹಿಸುತ್ತಿರುವಾಗ ನಾವು ಬೇಕಾದಾಗ ಎರಡು ತಿಂಗಳ ರಜೆಯನ್ನು ಪಡೆಯುತ್ತಿದ್ದೇವು. ನಾನು 2000ನೇ ಸಾಲಿನಲ್ಲಿ ಯಾವ ತಿಂಗಳಿನಂದು ರಜೆ ಪಡೆದಿರುತ್ತೇನೆ ಎಂದು ನನಗೆ ಗೊತ್ತಿರುವದಿಲ್ಲ. ನಾನು ಹೆಚ್ಚು ಯಾವ ತಿಂಗಳಲ್ಲಿ ರಜೆ ಪಡೆದಿರುತ್ತೇನೆ ಅಂತಾ ನಿಖರವಾಗಿ ಹೇಳಲು ಬರುವದಿಲ್ಲ. ನನ್ನ 22 ವರ್ಷ ಸೇವಾವಧಿಯಲ್ಲಿ ಎಪ್ರಿಲ್, ಮೇ ತಿಂಗಳಲ್ಲಿ ಮತ್ತು ಹೆಚ್ಚಾಗಿ ಜನೇವರಿ, ಪೆಬ್ರವರಿಯಲ್ಲಿ ರಜೆ ಪಡೆಯುತ್ತಿದ್ದೇನು. ನೀವು ಯಾವ ತಿಂಗಳಲ್ಲಿ ರಜೆ ಪಡೆಯುತ್ತಿದ್ದೀರಿ ಅಂತಾ ನಿಖರವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೀರಾ ಅಂತಾ ಕೇಳಲು ಸಾಕ್ಷಿಯು ಅದರ ಅವಶ್ಯಕತೆ ಇರುವದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂಬರಃ 63/3 ಕ್ಷೇತ್ರ 04ಎ-15ಗುಂಟೆ ಪೈಕಿ ದಕ್ಷಿಣ ದಿಕ್ಕಿನ 01ಎಕರೆಗೆ ಸಂಬಂಧಿಸಿದಂತೆ ನಾನು ದಾವೆಯನ್ನು ಮಾಡಿರುತ್ತೇನೆ. ಸದರಿ 01ಎಕರೆಯ ಪೂರ್ವಕ್ಕೆ: ಈರಮ್ಮ ರುದ್ರಯ್ಯ ಸದಾಶಿವಪೇಟ ಇವರ ಜಮೀನು. ಪಶ್ಚಿಮಕ್ಕೆ: ಖಾಸೀಂಸಾಬ ಗೌಸುಸಾಬ ಹರಪನಹಳ್ಳಿ ಇವರ ಜಮೀನು ಉತ್ತರಕ್ಕೆ: ನನ್ನದೇ ಜಮೀನು ಇರುತ್ತದೆ, ದಕ್ಷಿಣಕ್ಕೆ: ಧರ್ಮಾ ನದಿ ಇರುತ್ತದೆ.

ನನ್ನ ಖರೀದಿ ಪತ್ರದಲ್ಲಿ ದಾವಾದಾಸ್ತಿಯ ಚೆಕ್‌ಬಂದಿಯನ್ನು ನಮೂದಿಸಿರುತ್ತೇವೆ. ಖರೀದಿ ಕರಾರು ಪತ್ರದಲ್ಲಿರುವ ಚಕಬಂದಿ ಮತ್ತು ವಾದಪತ್ರದಲ್ಲಿರುವ ಚೆಕ್‌ಬಂದಿ ಒಂದೇ ರೀತಿ ಇರುತ್ತದೆ. ಸಾಕ್ಷಿಯು ಮುಂದುವೆದು ಅದು ಒಂದು ಎಕರೆಗೆ ಸಂಬಂಧಿಸಿದಂತೆ ಇರುತ್ತದೆ ಎಂದು ನುಡಿಯುತ್ತಾರೆ. ಸಂಚಕಾರ ಪತ್ರದಲ್ಲಿ ಉತ್ತರಕ್ಕೆ: ತಿರಕಪ್ಪ ಪರಪ್ಪ ಭದ್ರಣ್ಣನವರ ಅಂತಾ ಇರುತ್ತದೆ ಅಂದರೆ ಸಾಕ್ಷಿಯು ಇದು 04ಎಕರೆ 15ಗುಂಟೆಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇರುತ್ತದೆ ಎಂದು ನುಡಿಯುತ್ತಾರೆ. 01 ಎಕರೆಗೆ ಸಂಬಂಧಿಸಿದಂತೆ ಚೆಕ್‌ಬಂದಿ ಬರೆಯಲು ಏನಾದರೂ ತೊಂದರೆ ಇತ್ತಾ ಅಂತಾ ಕೇಳಲು ಸಾಕ್ಷಿಯು ಅದು ಸಾಮೂಹಿಕವಾಗಿ ಇರುತ್ತದೆ ಎಂದು ನುಡಿಯುತ್ತಾರೆ. ಸಂಚಕಾರ ಪತ್ರದ ಸಮಯದಲ್ಲಿ ಯಾರ ಯಾರ ಹಿಸ್ಸೇಗೆ ಯಾವ ದಿಕ್ಕಿಗೆ ಇದೆ ಅಂತಾ ಗೊತ್ತಿರಲಿಲ್ಲ ಅಂದರೆ ಸಾಕ್ಷಿಯು ಅವರವರ ಆಸ್ತಿಗಳು ಅವರ ಹೆಸರಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ದಕ್ಷಿಣ ದಿಕ್ಕಿನ 01 ಎಕರಗೆ ಚೆಕ್‌ಬಂದಿ ಬರೆಯಲು ಏನಾದರೂ ತೊಂದರೆ ಇತ್ತಾ ಅಂತಾ ಕೇಳಲು ಸಾಕ್ಷಿಯು ಅದು ಸಾಮೂಹಿಕವಾಗಿ ನುಡಿದಿರುತ್ತಾರೆ.

ಸಂಚಕಾರ ಪತ್ರದ ಮಾತುಕತೆಯು ದಿನಾಂಕಃ 09-05-2002 ರಂದು ಆಗಿರುತ್ತದೆ. ಸದರಿ ಮಾತುಕತೆಗೆ ಗುರುಸಂಗಪ್ಪ ತೆಗ್ಗಿಹಳ್ಳಿ, ಶಿವಪ್ಪ ಸತ್ಯಪ್ಪ ಭದ್ರಣ್ಣನವರ, ಸುರೇಶ ಬಸಪ್ಪ ತೆಗ್ಗಿಹಳ್ಳಿ, ಮೌಲಾಲಿ ಬಾಬುಗೌಡ ಪಾಟೀಲ, ಚನ್ನಬಸಪ್ಪ ಬಸಪ್ಪ ಮಳೆಯಪ್ಪನವರ (ಸದರಿಯವರು ಪೋತಿಯಾಗಿರುತ್ತಾರೆ) ಹಾಜರಿದ್ದರು. ಸದರಿಯವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ,

ಸದರಿ ಮಾತುಕತೆಯು ಹರವಿಯ ನಮ್ಮ ತಂದೆಯ ಮನೆಯಲ್ಲಿ ಆಗಿರುತ್ತದೆ. ಪ್ರತಿವಾದಿಯು ನೌಕರಿ ಮಾಡುತ್ತಾ ಧಾರವಾಡದಲ್ಲಿರುತ್ತಾನೆ. ಪ್ರತಿವಾದಿಯು ಧಾರವಾಡದ ಭಾರತೀಯ ಸಂಚಾರ ನಿಗಮದಲ್ಲಿ ಟೆಲಿಫೋನ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದರು ಅಂದರೆ ಸಾಕ್ಷಿಯು ಅವರು ಅಟೆಂಡರ್ ಆಗಿ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರು ಅಟೆಂಡರ್ ಅಂತಾ ಕೆಲಸ ಮಾಡುತ್ತಿದ್ದಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಾತುಕತೆಗೆ ಮದ್ಯಾಹ್ನ 12-30 ರಿಂದ 1-00 ಗಂಟೆಗೆ ಬಂದಿದ್ದರು. ಧಾರವಾಡದಿದ ಪ್ರತಿವಾದಿ ಒಬ್ಬರೇ ಬಂದಿದ್ದರು. ಮೇಲ್ಕಾಣಿಸಿದ ಸಾಕ್ಷಿದಾರರನ್ನು ಪ್ರತಿವಾದಿಯೇ ಕರೆದುಕೊಂಡು ಬಂದಿದ್ದರು. ನಮ್ಮ ಪರವಾಗಿ ಮೇಲ್ಕಾಣಿಸಿದ ಸಾಕ್ಷಿದಾರರ ಪೈಕಿ ಸುರೇಶ ಬಸಪ್ಪ ತೆಗ್ಗಿಹಳ್ಳಿ ಮತ್ತು ಮೌಲಾಲಿ ಬಾಬುಗೌಡ ಪಾಟೀಲ, ಶಿವಪ್ಪ ಸತ್ಯಪ್ಪ ಭದ್ರಣ್ಣನವರ, ಗುರುಸಂಗಪ್ಪ ತೆಗ್ಗಿಹಳ್ಳಿ ಇವರು ಬಂದಿದ್ದರು. ನನ್ನ ತಂದೆಯ ಇನ್ನಿಬ್ಬರೂ ಸಹೋದರರು ಬಂದಿರುವದಿಲ್ಲ. ಸದರಿಯವರನ್ನು ಕರೆಯಲು ಏನಾದರೂ ತೊಂದರೆ ಇತ್ತಾ ಅಂತಾ ಕೇಳಲು ಸಾಕ್ಷಿಯು ಎಲ್ಲರೂ ಬೇರೆಯಾಗಿದ್ದರು ಆ ಕಾರಣದಿಂದ ಕರೆದಿರುವದಿಲ್ಲ ಎಂದು ನುಡಿಯುತ್ತಾರೆ. ಮಾತುಕತೆಯಾಗುವ ಪೂರ್ವದಲ್ಲಿ ಯಾರು ಸಾಕ್ಷಿದಾರರನ್ನು ಕರೆದುಕೊಂಡು ಬರಬೇಕು ಅಂತಾ ಮೊದಲೇ ನಿರ್ಧಾರವಾಗಿತ್ತು ಅಂದರೆ ಸರಿಯಲ್ಲ. ಸದರಿ ಸಾಕ್ಷಿದಾರರು ನಮ್ಮ ಊರಿನವರು ಮತ್ತು ಜಾತಿಷ್ಟರು ಇರುತ್ತಾರೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಪ್ರತಿವಾದಿಗೂ ಸಹಿತ ಬೇಕಾದವರು ಇರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ಧಾರವಾಡದಲ್ಲಿ ವಾಸವಾಗಿರುವದರಿಂದ ಸಾಕ್ಷಿದಾರರ ಸಂಪರ್ಕ ಇರುವದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿದಾರರೆಲ್ಲರೂ ಬಂದು ಕುಳಿತುಕೊಂಡು ಮಾತುಕತೆ ಪ್ರಾರಂಬವಾಗಬೇಕಾದರೆ ಸಮಯ ಮದ್ಯಾಹ್ನ 3-00 ಗಂಟೆ ಆಗಿರುತ್ತದೆ. ದಾವಾದಾಸ್ತಿಯನ್ನು ಕೊಡುತ್ತೇವೆ ಅಂತಾ ಮೊದಲೇ ನಾನು ತಿಳಿಸಿರುವದಿಲ್ಲ. ಜಮೀನನ್ನು ಹಿಡಿಯಲು ಆ ದಿನ ನಮ್ಮನ್ನು ಬಿಟ್ಟು ಬೇರೆ ಯಾರು ಬಂದಿರುವದಿಲ್ಲ. ಸದರಿ ಆಸ್ತಿಯು ಪಿರ್ತಾರ್ಜಿತವಾಗಿರುವದರಿಂದ ನಮ್ಮನ್ನು ಬಿಟ್ಟು ಬೇರೆ ಯಾರಿಗೆ ಹಿಡಿದುಕೊಳ್ಳಲು ಬರುವದಿಲ್ಲ ಎಂದು ನುಡಿಯುತ್ತಾರೆ. ಎಕರೆಗೆ ನಾನು 25000/- ಗಳಿಗೆ ಕೇಳಿರುತ್ತೇನೆ. ಪ್ರತಿವಾದಿಯರು

ರೂ.40,000/- ಹೇಳಿರುತ್ತಾನೆ. ನನ್ನ ಪ್ರಕಾರ 2002ರಲ್ಲಿ ಎಕರೆಗೆ 6 ರಿಂದ 7 ಲಕ್ಷ ರೂಗಳು ಕಿಮ್ಮತ್ತು ಇರುತ್ತದೆ ಅಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಒಂದು ವಾರದ ನಂತರ ಬರೆಯಲಾಗಿದೆ. ನಾನು ಆ ಸಮಯದಲ್ಲಿ ಊರಲ್ಲಿ ಇದ್ದೇನು. ಆ ಸಮಯದಲ್ಲಿ ಪ್ರತಿವಾದಿ ಸಹಿತ ನೌಕರಿಯನ್ನು ಮಾಡುತ್ತಿದ್ದರು. ದಿನಾಂಕಃ 10-05-2002ರಂದು ಸಂಚಕಾರ ಪತ್ರವನ್ನು ಬರೆಯಲಾಗಿದೆ. ಆ ದಿನ ಯಾವ ವಾರ ಇತ್ತು ಅಂತಾ ನನಗೆ ನೆನಪಿರುವದಿಲ್ಲ. ಸಂಬಂಧಪಟ್ಟ ದಾವಾದಾಸ್ತಿಗಳ ಪಹಣಿ ಪತ್ರಿಕೆಯನ್ನು ತಂದುಕೊಟ್ಟಿರುವದಿಲ್ಲ. ನಾನು ಸಹಿತ ಸದರಿ ಕಾಗದ ಪತ್ರವನ್ನು ತೆಗೆಯಿಸಿರುವದಿಲ್ಲ. ಸದರಿ ದಾಖಲೆಯನ್ನು ತೆಗೆಯಿಸಲು ನನಗೆ ಯಾವುದೇ ತೊಂದರೆ ಇರುವದಿಲ್ಲ. ಪಹಣಿ ಪತ್ರಿಕೆ ಇಲ್ಲದೇ ಮಾತುಕತೆಯಾಗಿರುತ್ತದೆ. 2002 ಕ್ಕಿಂತ ಪೂರ್ವದಲ್ಲಿ ನಾನು ದಾವಾದಾಸ್ತಿಯ ಉತಾರವನ್ನು ನೋಡಿರುವದಿಲ್ಲ. ಉತಾರೆ ಇಲ್ಲದೇ ನಾನು ಖರೀದಿ ಮಾಡಿಕೊಳ್ಳುವದಿಲ್ಲ ಅಂತಾ ಏನಾದರೂ ಹಿರಿಯರಿಗೆ ಕೇಳಿದ್ದೀರಾ ಅಂತಾ ಕೇಳಲು ಸಾಕ್ಷಿಯು ಹಿರಿಯರು ಹೇಳಿದ್ದರಿಂದ ನಾನು ಉತಾರೆಯನ್ನು ನೋಡಿರುವದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಂಚಕಾರ ಪತ್ರವು ನಮ್ಮ ಮನೆಯಲ್ಲಿ ಬರೆಯಲಾಗಿರುತ್ತದೆ. ಸದರಿ ಸಮಯದಲ್ಲಿ ಮೌಲಾಲಿ ಬಾಬುಗೌಡ ಪಾಟೀಲ, ಸುರೇಶ ಬಸಪ್ಪ ತೆಗ್ಗಿಹಳ್ಳಿ, ಶಿವಪ್ಪ ಸತ್ಯಪ್ಪ ಭದ್ರಣ್ಣನವರ ಹಾಜರಿದ್ದರು. ಛಾಪಾ ಕಾಗದವನ್ನು ಮಾತುಕತೆ ಆದ ನಂತರ ತೆಗೆದುಕೊಳ್ಳಲಾಯಿತು. ಸದರಿ ಛಾಪಾಕಾಗದವನ್ನು ಬಂಕಾಪೂರ ಗ್ರಾಮದಲ್ಲಿ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಛಾಪಾ ಕಾಗದವು 50-00 ರೂ ಮುಖಬೆಲೆಯದ್ದು ಇರುತ್ತದೆ.

ಸದರಿ ದಾಖಲೆಯನ್ನು ಹಿರಿಯರ ಹೇಳಿಕೆಯ ಮೇರೆಗೆ ನಾನೇ ಬರೆದಿರುತ್ತೇನೆ. ನಾನು ಅಲ್ಲಿಯೇ ಕುಳಿತು ಬಂದಿರುತ್ತೇನೆ. ಪ್ರತಿವಾದಿಗೆ ಬರೆಯಲು ಬರುವದಿಲ್ಲ. ಹಿರಿಯರು ಹೇಳಿದ್ದರಿಂದ ನಾನೇ ಬರೆದಿರುತ್ತೇನೆ. ಅಲ್ಲಿ ಕೂಡಿದಂತಹ ಹಿರಿಯರಿಗೆ ಅಷ್ಟೊಂದು ಬರೆಯಲು ತಿಳಿಯುತ್ತಿರಲಿಲ್ಲ ನಿಮ್ಮ ಅಕ್ಷರ ಚೆನ್ನಾಗಿ ಆಗುತ್ತವೆ ಅಂತಾ ಹೇಳಿದ್ದರಿಂದ ನಾನು ಬರೆದಿರುತ್ತೇನೆ. ನನ್ನದೇ ಪೆನ್‌ನಿಂದ ಬರೆದಿರುತ್ತೇನೆ. ನನ್ನನ್ನು ಹೊರತುಪಡಿಸಿ ಬೇರೆಯವರ ಹತ್ತಿರ ಪೆನ್ ಇರಲಿಲ್ಲ. ಪೆನ್ನಿನಲ್ಲಿರುವ ಮಸಿ ಮುಗಿದಿದ್ದರಿಂದ ಬೇರೆಯವರ ಹತ್ತಿರ ಇರುವ ಪೆನ್‌ನಿಂದ ಸಹಿ ಮಾಡಿರುತ್ತೇನೆ. ಸದರಿ ಪತ್ರವನ್ನು

ಬರೆದು ನಾನೇ ಮೊದಲು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಬರೆದು ಹಿರಿಯರಿಗೆ ಓದಿ ಹೇಳಿರುತ್ತೇನೆ. ಹಿರಿಯರು ಮೊದಲು ಪ್ರತಿವಾದಿಗೆ ಸಹಿ ಮಾಡಲು ಹೇಳಿರುತ್ತಾರೆ. ಛಾಪಾಕಾಗದವನ್ನು ತರುವಾಗ ಪ್ರತಿವಾದಿಯು ಮೊದಲೇ ಸಹಿ ಮಾಡಿರುತ್ತಾನೆ. ಮೊದಲೇ ಸಹಿ ಮಾಡಿದ ದಾಖಲೆಗೆ ಅದಕ್ಕೆ ಹೊಂದಾಣಿಕೆಯಾಗುವಂತೆ ಬರೆದಿರುತ್ತೇವೆ. ಸದರಿ ದಾಖಲೆಗೆ ಮೊದಲು ಸಾಕ್ಷಿ ಅಂತಾ ಶಿವಪ್ಪ ಸತ್ಯಪ್ಪ ಬದ್ರಣ್ಣನವರ ಇವರು ಸಹಿ ಮಾಡಿರುತ್ತಾರೆ. ನಂತರ ಚನ್ನಬಸಪ್ಪ ಇವರು ಸಹಿ ಮಾಡಿರುತ್ತಾರೆ. ನಂತರ ಮೌಲಾಲಿ, ಗುರುಸಂಗಪ್ಪ ತೆಗ್ಗಿಹಳ್ಳಿ ಇವರು ಸಹಿ ಮಾಡಿರುತ್ತಾರೆ. ಸದರಿ ದಾಖಲೆಯಲ್ಲಿ ಪ್ರತಿವಾದಿಯು ಆತನ ಮಗಳ ಮದುವೆಗಾಗಿ ದಾವಾದಾಸ್ತಿಯನ್ನು ಮಾರಾಟ ಮಾಡುತ್ತಿದ್ದಾನೆ ಅಂತಾ ಬರೆದಿರುತ್ತೇನೆ. ಸದರಿ ದಾಖಲೆಯಲ್ಲಿ ನಾನು ಕರೆದಾಗ ಬಂದು ಖರೀದಿ ಕಾಗದ ಮಾಡಿಕೊಡುವ ಮತ್ತು ನನ್ನ ವಾರಸುದಾರರಿಂದ ವ ಇತರರಿಂದ ಯಾವುದೇ ತಂಟೆ ತಕರಾರು ಬಂದಲ್ಲಿ ಅದನ್ನು ನಾನೇ ಬರೆಸಿಕೊಳ್ಳುತ್ತೇನೆ ಅಂತಾ ಶರತ್‌ನ್ನು ಬರೆಯಲಾಗಿದೆ. ನನ್ನ ಪ್ರಕಾರ ರೂ.50/- ಕೊಟ್ಟು ಖರೀದಿ ಮಾಡಿಕೊಳ್ಳಲು ಏನೂ ತಕರಾರು ಇತ್ತಾ ಅಂತಾ ಕೇಳಲು ಸಾಕ್ಷಿಯು ಖರೀದಿ ಸಮಯದಲ್ಲಿ ರೂ.50/- ಕೊಟ್ಟು ಖರೀದಿ ಮಾಡಿಕೊಳ್ಳುವ ಶರತ್‌ನ್ನು ಹಾಕಲಾಗಿತ್ತು, ಅದೇ ದಿನ ಖರೀದಿ ಮಾಡಿಕೊಳ್ಳಲು ತೊಂದರೆ ಇತ್ತಾ ಅಂತಾ ಕೇಳಲು ಸಾಕ್ಷಿಯು ನನಗೆ ರಜೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾಖಲೆಯಾದ ಮೇಲೆ 4-5 ದಿನ ಇದ್ದೇನು. ನಾನು ಹೇಳುವ ಪ್ರಕಾರ ದಾವಾದಾಸ್ತಿಯ ಚೆಕ್‌ಬಂದಿಗೂ ಮತ್ತು ಸಂಚಕಾರ ಪತ್ರದಲ್ಲಿರುವ ಚೆಕ್‌ಬಂದಿಗೂ ಬಹಳ ವ್ಯತ್ಯಾಸ ಇರುತ್ತದೆ ಅಂದರೆ ಸರಿಯಲ್ಲ, ನಾನು ವ್ಯವಹಾರವಾದ ನಂತರ ನಾವು ಖರೀದಿ ಮಾಡಿಕೊಳ್ಳಲು ಕೇಳಿದರು ಇವತ್ತು ನಾಳೆ ಅನ್ನುತ್ತಾ ಬಂದಿರುತ್ತಾರೆ. ಈ ಪತ್ರಕ್ಕೆ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳ ಸಹಿಯನ್ನು ಪಡೆದಿರುತ್ತೀರಾ ಅಂತಾ ಕೇಳಲು ಸಾಕ್ಷಿಯು ಗಂಡ ಇರುವಾಗ ಹೆಂಡತಿಯ ಸಹಿ ಅವಶ್ಯಕತೆ ಇಲ್ಲಾ ಅಂತಾ ನುಡಿದು, ಮಕ್ಕಳು ಅಲ್ಪವಯಸ್ಕರು ಇದ್ದರು ಅಂತಾ ನುಡಿಯುತ್ತಾರೆ. ಮತ್ತು ಮಕ್ಕಳು ಮದುವೆಯಾದ ನಂತರ ವಯಸ್ಕರಾಗಿರುತ್ತಾರೆ. ಪ್ರತಿವಾದಿಯ ಮಕ್ಕಳು ಯಾವ ದಿನಾಂಕದಂದು ಜನಿಸಿರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ, ನಾನು 2002 ರಿಂದ ಖರೀದಿ

ಪತ್ರವನ್ನು ನೋಂದು ಮಾಡಿಕೊಡಲು ಕೇಳುತ್ತಾ ಬಂದಿರುತ್ತೇನೆ. ಮೊದಲು ನಾನು ಕೇಳಿ ನಂತರ ಸಾಕ್ಷಿದಾರರ ಮೂಲಕ ಕೇಳಿಕೊಂಡಿರುತ್ತೇವೆ. 2002 ರಿಂದ ಪ್ರತಿವರ್ಷ ಕೇಳುತ್ತಾ ಬಂದಿರುತ್ತೇವೆ. ನೋಟಿಸ ಕೊಡಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ನೋಟಿಸಿನಲ್ಲಿ ಯಾವುದೇ ರೀತಿ ಶರತ್ ಹಾಕಿ ನೋಟಿಸ ಕೊಟ್ಟಿರುವದಿಲ್ಲ. ದಾಖಲೆ ದುರಸ್ತಿ ಮಾಡಿ ನೋಂದು ಮಾಡಿಸಿಕೊಡುವ ಶರತ್‌ನ್ನು ಏನಾದರೂ ಹಾಕಿರುತ್ತೀರಾ ಅಂತಾ ಕೇಳಲು ಅದು ಮೊದಲೇ ದುರಸ್ತಿಯಾದ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ರಜೆಗೆ ಬರುವಾಗ ರೂ.32,450/- ಗಳನ್ನು ತೆಗೆದುಕೊಂಡು ಬಂದಿದ್ದೇನು. ನಾನು ಹಣವನ್ನು ಕಡಿಮೆ ತಂದಿದ್ದೇನು, ಅದಕ್ಕೆ ಸ್ವಲ್ಪ ಬಂಗಾರವನ್ನು ಎಸ್.ಬಿ.ಐ ಬ್ಯಾಂಕಿನಲ್ಲಿ ಇಟ್ಟು ಹಣವನ್ನು ತಂದಿದ್ದೇನು. ಎಸ್.ಬಿ.ಐ ಬ್ಯಾಂಕ್‌ನಲ್ಲಿ ನನ್ನ ಖಾತೆ ಇರುವದಿಲ್ಲ, ಬಂಗಾರ ಇಟ್ಟುಕೊಂಡು ನನಗೆ ನೇರವಾಗಿ ಹಣಕೊಟ್ಟಿರುತ್ತಾರೆ. ಬಂಗಾರವನ್ನು ಇಟ್ಟುಕೊಂಡು ಕೊಟ್ಟಂತಹ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ಸದರಿ ನೋಟುಗಳು 100 ಮತ್ತು 50 ಮುಖಬೆಲೆಯ ಹಣ ಇತ್ತು ಅಂತಾ ನನಗೆ ನೆನಪಿರುವದಿಲ್ಲ. ಆದರೆ ಎಷ್ಟೇಷ್ಟು ಇದ್ದವು ಅಂತಾ ನನಗೆ ನೆನಪಿರುವದಿಲ್ಲ, ಸದರಿ ಹಣವನ್ನು ನಾನು ಗುರುಸಂಗಪ್ಪ ತೆಗ್ಗಿಹಳ್ಳಿ ಈತನ ಹತ್ತಿರ ಕೊಟ್ಟಿರುತ್ತೇನೆ. ಸದರಿಯವನು ಒಬ್ಬನೇ ಹಣವನ್ನು ಎಣಿಸಿರುತ್ತಾನೆ. ನಾನು ಆಧರಿಸುವ ಪ್ರಕಾರ ಪ್ರತಿವಾದಿ ದಾವಾದಾಸ್ತಿಗೆ ಸಂಬಂಧಿಸಿದಂತೆ ಯಾವುದೇ ಸಂಚಕಾರ ಪತ್ರವನ್ನು ಬರೆದುಕೊಟ್ಟಿರುವದಿಲ್ಲ ಅಂದರೆ ಸರಿಯಲ್ಲ, ರೂ.50/- ಹಣವನ್ನು ಕೊಡುವದು ಬಾಕಿ ಇರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈಗಲೂ ರೂ.50/- ಕೊಡಲು ತಯಾರಿರುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗೆ ಮಗಳ ಮದುವೆ ಮಾಡಲು ಹಣಕಾಸಿನ ಅವಶ್ಯಕತೆ ಇರಲಿಲ್ಲ ಅಂದರೆ ಸರಿಯಲ್ಲ. 2002 ಜನೇವರಿ ತಿಂಗಳಲ್ಲಿ ಪ್ರತಿವಾದಿಗೆ ರೂ.6728/- ಸಂಬಳ ಇತ್ತು ಅಂದರೆ ನನಗೆ ಗೊತ್ತಿರುವದಿಲ್ಲ, ಸದರಿಯವರಿಗೆ ಯಾವುದೇ ಹಣಕಾಸಿನ ಅಡಚಣೆ ಇರುತ್ತದೆ ಅಂದರೆ ಸರಿಯಲ್ಲ, ಪ್ರತಿವಾದಿಗೆ ಇನ್ನು 5 ಎಕರೆ ಜಮೀನಿನ ಉತ್ಪನ್ನ ಇರುವದರಿಂದ ಪ್ರತಿವಾದಿಗೆ ಯಾವುದೇ ಹಣಕಾಸಿನ ಅಡೆತಡೆ ಇರಲಿಲ್ಲ ಅಂದರೆ ಸರಿಯಲ್ಲ, ನಾನು

ವೃತ್ತಿ ಮುಗಿಸಿಕೊಂಡು ಬಂದು ಹೇಗಾದರೂ ಮಾಡಿ ದಾವಾದಾಸ್ತಿಯನ್ನು ಲಪಟಾಯಿಸಬೇಕು ಎನ್ನುವ ಉದ್ದೇಶದಿಂದ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖೊಟ್ಟಿ ದಾವೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ದಾಖಲೆಗೆ ಪ್ರತಿವಾದಿ ತರಹ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನೇ ನನಗೆ ಬೇಕಾದ ಹಾಗೆ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಈ ದಾವೆಗೆ ಯಾವುದೇ ಕಾರಣ ಉದ್ಭವಿಸಿರುವದಿಲ್ಲ ಅಂದರೆ ಸರಿಯಲ್ಲ. ಸಮಯ ಮೀರಿದ ದಾವೆಯನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಿದೆ)**

ಓ.ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹಾನಗಲ್ಲ.

ದಿನಾಂಕಃ 19-06-2018

ಸಾಕ್ಷಿದಾರರ ಸಹಿ